84

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಶರಣಗೌಡ ಬಯ್ಯಾಪುರ ಇವರ ನಿಯಮ 330ರ ಗಮನ ಸೆಳೆಯುವ ಸೂಚನೆಗೆ ಉತ್ತರ

ವಿಷಯ: ಅಬಕಾರಿ ಇಲಾಖೆಯಲ್ಲಿ ಲೋಕಾಯುಕ್ತ ದಾಳಿ/ಟ್ರಾಪ್‌ಗೆ ಒಳಗಾದ ಅಧಿಕಾರಿಗಳನ್ನು ಸರ್ಕಾರದ ನಿಯಮಗಳು ಹಾಗೂ ಸುತ್ತೋಲೆಗಳ ರೀತ್ಯಾ ಅಂತಹ ಅಧಿಕಾರಿಗಳನ್ನು ನಾನ್ – ಎಕ್ಸಿಕ್ಯೂಟೀವ್ ಹುದ್ದೆಗಳಿಗೆ ವರ್ಗಾಯಿಸಬೇಕಾಗಿದ್ದು, ಆದರೆ, ಅಂತಹ ಅಧಿಕಾರಿಗಳಿಗೆ ಪುನ: ಎಕ್ಸಿಕ್ಯೂಟೀವ್ ಹುದ್ದೆಗಳನ್ನು ನೀಡಿರುವುದು ಕಾನೂನು ಬಾಹಿರವಾಗಿರುತ್ತದೆ ಹಾಗೂ ದಾಳಿ/ ಟ್ರಾಪ್‌ಗೆ ಒಳಗಾದ ಕೆಲವು ಅಧಿಕಾರಿಗಳು ಕೆ.ಎ.ಟಿ ನ್ಯಾಯಾಲಯದಿಂದ ತಂದಿರುವ ತಡೆಯಾಜ್ಞೆ ಆದೇಶದ ವಿರುದ್ಧ ಇಲಾಖೆಯು ವರ್ಷಗಳು ಕಳೆದರೂ ಸಹ ತಡೆಯಾಜ್ಞೆ ತೆರವುಗೊಳಿಸಲು ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸದೇ ಅಂತಹ ಅಧಿಕಾರಿಗಳಿಗೆ ಪುನ: ಆಯಕಟ್ಟಿನ ಎಕ್ಸಿಕ್ಯೂಟೀವ್ ಸ್ಥಳಗಳಿಗೆ ವರ್ಗಾಯಿಸಲಾಗಿರುತ್ತದೆ.

ಈ ಬಗ್ಗೆ ಮಾಧ್ಯಮಗಳಲ್ಲಿ ಹಲವಾರು ಬಾರಿ ವರದಿಯಾಗಿದ್ದರೂ ಸಹ ಸರ್ಕಾರವು ಯಾವುದೇ ಕ್ರಮ ಕೈಗೊಳ್ಳದೇ ಪರೋಕ್ಷವಾಗಿ ಭ್ರಷ್ಟ ಅಧಿಕಾರಿಗಳಿಗೆ ಎಕ್ಸಿಕ್ಯೂಟೀವ್ ಹುದ್ದೆಗಳಲ್ಲಿ ಮುಂದುವರೆಯಲು ಸಹಕಾರ ನೀಡುತ್ತಿರುವ ಬಗ್ಗೆ ನಿಯಮ 330ರಡಿ ಚರ್ಚಿಸಲು ಕೋರುತ್ತೇನೆ.

ಸರ್ಕಾರದ ಉತ್ತರ:-

ಅಬಕಾರಿ ಇಲಾಖೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಲೋಕಾಯುಕ್ತ ದಾಳಿ/ಟ್ರಾಪ್ ಗೆ ಸಂಬಂಧಿಸಿದಂತೆ ಒಟ್ಟು 09 ಅಧಿಕಾರಿ/ನೌಕರರುಗಳ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ.

1) ಶ್ರೀ ಶಿವಹರಳಯ್ಯ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ

ಶ್ರೀ ಶಿವಹರಳಯ್ಯ, ಅಂದಿನ ಅಬಕಾರಿ ಉಪ ಅಧೀಕ್ಷಕರು, ಚಿತ್ರದುರ್ಗ ಉಪ ವಿಭಾಗ, ಚಿತ್ರದುರ್ಗ ಇವರ ವಿರುದ್ಧ ಲಂಚ ಬೇಡಿಕೆ ಇಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಭ್ರಷ್ಟಾಚಾರ ನಿಗ್ರಹ ದಳ, ಪೊಲೀಸ್ ಠಾಣೆ, ಚಿತ್ರದುರ್ಗ ಇಲ್ಲಿ ಗುನ್ನೆ ಸಂಖ್ಯೆ: 26/2021, ದಿನಾಂಕ:03-12-2021 ದಾಖಲಾಗಿದ್ದು, ಆಪಾದಿತರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾದ ಹಿನ್ನೆಲೆಯಲ್ಲಿ ಆದೇಶ ಸಂಖ್ಯೆ: ಇಸಿಇ/45/ಡಿಎಸ್‌ಸಿ/ಹೊಸಪೇ/2021, ದಿನಾಂಕ:18.12.2021ರಲ್ಲಿ ಸದರಿಯವರನ್ನು ಅಮಾನತ್ತುಪಡಿಸಿ ಅವರ ಲೀನ್ ಅನ್ನು ಬದಲಾಯಿಸಿ ಅಬಕಾರಿ ಉಪ

ಆಯುಕ್ತರ ಕಛೇರಿ, ಕಲಬುರಗಿ ಜಿಲ್ಲೆ ಇಲ್ಲಿ ಖಾಲಿ ಇರುವ ಅಬಕಾರಿ ಉಪ ಅಧೀಕ್ಷಕರ ಹುದ್ದೆಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 52 ಸೇಇವಿ 2020, ದಿನಾಂಕ: 25-11-2020 ರನ್ವಯ ಆಪಾದಿತರ ಅಮಾನತನ್ನು 6 ತಿಂಗಳ ಒಳಗಾಗಿ ತೆರವುಗೊಳಿಸಲು ಕ್ರಮ ಜರುಗಿಸಬೇಕಾಗಿರುವುದರಿಂದ ಹಾಗೂ ನೌಕರರ ಮನವಿಯ ಮೇರೆಗೆ ಭ್ರಷ್ಟಾಚಾರ ನಿಗ್ರಹ ದಳ ಇವರ ಪತ್ರ ಸಂಖ್ಯೆ:ಎಸಿಬಿ/ಕೇಂ.ಕ/ಚಿತ್ರದುರ್ಗ/ಮೊ.ಸಂ.14/2021, ದಿನಾಂಕ:11.04.2022ರ ಅಭಿಪ್ರಾಯದಂತೆ ಆಪಾದಿತರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ನಡವಳಿ ಸಂಖ್ಯೆ: ಇಸಿಇ/45/ಡಿಎಸ್‌ಸಿ/ಹೊಸಪೇ/2021, ದಿನಾಂಕ: 07.05.2022ರಲ್ಲಿ ಅಮಾನತ್ತನ್ನು ತೆರವುಗೊಳಿಸಿ ಕಾರ್ಯನಿರ್ವಾಹಕವಲ್ಲದ ಅಬಕಾರಿ ಉಪ ಅಧೀಕ್ಷಕರ ಕಛೇರಿ, ಮೆ:ಓರಿಯನ್ ಡಿಸ್ಟಿಲರಿ, ಬೆಂಗಳೂರು ನಗರ ಜಿಲ್ಲೆ, (ಬಿಯುಡಿ-1) ಇಲ್ಲಿ ಖಾಲಿ ಇರುವ ಅಬಕಾರಿ ಉಪ ಅಧೀಕ್ಷಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ತೈನಾತಿಸಿ ಆದೇಶಿಸಲಾಗಿರುತ್ತದೆ.

2) ಶ್ರೀ ಯಶವಂತ ಕುಮಾರ್, ಎ.ಆರ್. ಅಂದಿನ ಅಬಕಾರಿ ನಿರೀಕ್ಷಕರು, ಮೈಸೂರು ವಲಯ-4, ಮೈಸೂರು ನಗರ ಜಿಲ್ಲೆ.

ಶ್ರೀ ಯಶವಂತ ಕುಮಾರ್.ಎ.ಆರ್. ಅಂದಿನ ಅಬಕಾರಿ ನಿರೀಕ್ಷಕರು, ಮೈಸೂರು ವಲಯ-4, ಮೈಸೂರು ನಗರ ಜಿಲ್ಲೆ ಇವರು ಸನ್ನದುದಾರರಿಂದ ಲಂಚ ಬೇಡಿಕೆ ಇಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಎ.ಸಿ.ಬಿ ಪೋಲೀಸ್ ಠಾಣೆ, ಮೈಸೂರು ದಾಖಲಾದ ಗುನ್ನೆ ಸಂಖ್ಯೆ:03/2022, ದಿನಾಂಕ:31.01.2022 ಪ್ರಕರಣದಲ್ಲಿ ಆಪಾದಿತರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾದಂತೆ ಕಂಡು ಬಂದ ಹಿನ್ನೆಲೆಯಲ್ಲಿ ನಡವಳಿ ಸಂಖ್ಯೆ:ಇಸಿಇ/30/ಎಂವೈಎಸ್/ಡಿಎಸ್‌ಸಿ/2022, ದಿನಾಂಕ:11.02.2022 ರಲ್ಲಿ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಬದಲಾಯಿಸಿ ಕೆ.ಎಸ್.ಬಿ.ಸಿ.ಎಲ್ ಡಿಪೋ, ಕುಶಾಲನಗರ, ಕೊಡಗು ಜಿಲ್ಲೆ ಇಲ್ಲಿ ಖಾಲಿ ಇರುವ ಅಬಕಾರಿ ನಿರೀಕ್ಷಕರ ಹುದ್ದೆಗೆ ತೈನಾತಿಸಲಾಗಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 52 ಸೇಇವಿ 2020, ದಿನಾಂಕ:25.11.2020 ರನ್ವಯ ಆಪಾದಿತರ ಅಮಾನತನ್ನು 6 ತಿಂಗಳ ಒಳಗಾಗಿ ತೆರವುಗೊಳಿಸಲು ಕ್ರಮ ಜರುಗಿಸಬೇಕಾಗಿರುವುದರಿಂದ ಹಾಗೂ ನೌಕರರ ಮನವಿಯ ಮೇರೆಗೆ ಭ್ರಷ್ಟಾಚಾರ ನಿಗ್ರಹ ದಳ ಇವರ ಪತ್ರ ಸಂಖ್ಯೆ: ಎಸ್‌ಪಿ/ಎ.ಸಿ.ಬಿಮೈ/ಅಪರಾಧ/ಪ್ರವ/06/2022, ದಿನಾಂಕ: 01-06-

2022 ರಲ್ಲಿನ ಅಭಿಪ್ರಾಯದಂತೆ ಆಪಾದಿತರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ನಡವಳಿ ಆದೇಶ ಸಂಖ್ಯೆ: ಇಸಿಇ/30/ಎಂವೈಎಸ್/ಡಿಎಸ್ ಸಿ/2022, ದಿನಾಂಕ:19–08–2022ರಲ್ಲಿ ಅವರ ಅಮಾನತ್ತನ್ನು ತೆರವುಗೊಳಿಸಿ ಕಾರ್ಯನಿರ್ವಾಹಕವಲ್ಲದ ಸುಲಾ ಗ್ರೇಪ್ (ಫ್ರೂಟ್) (ಹೆರಿಟೇಜ್) ವೈನರಿ ಪ್ರೈ.ಲಿ., ರಾಮನಗರ ಜಿಲ್ಲೆಗೆ ಸ್ಥಳ ನಿಯುಕ್ತಿಗೊಳಿಸಿ ತೈನಾತಿಸಿ ಆದೇಶಿಸಲಾಗಿರುತ್ತದೆ.

3) <u>ಕು. ಪ್ರೀತಿ ರಾಠೋಡ, ಅಂದಿನ ಅಬಕಾರಿ ಉಪ ನಿರೀಕ್ಷಕರು–2, ಕುಮಟಾ ವಲಯ</u>

ಕು. ಪ್ರೀತಿ ರಾಠೋಡ ಅಂದಿನ ಅಬಕಾರಿ ಉಪ ನಿರೀಕ್ಷಕರು–2 ಕುಮಟಾ ವಲಯ ಇವರು ಸನ್ನದುದಾರರಿಂದ ಲಂಚ ಬೇಡಿಕೆ ಇಟ್ಟಿರುವ ಆರೋಪಕ್ಕೆ ಸಂಬಂಧಿಸಿದಂತೆ ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಉತ್ತರ ಕನ್ನಡ ಜಿಲ್ಲೆ, ಕಾರವಾರ ಇಲ್ಲಿ ದಾಖಲಾದ ಗುನ್ನೆ ಸಂಖ್ಯೆ:18/2021–22, ದಿನಾಂಕ:26.02.2022ರ ಪ್ರಕರಣದಲ್ಲಿ ಆಪಾದಿತರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ನಡವಳಿ ಆದೇಶ ಸಂಖ್ಯೆ:ಎಕ್ಸೈಜ್–17011/10/2022/ಡಿಎಸ್‌ಸಿ/ಮಂ.ವಿ, ದಿನಾಂಕ:05.05.2022ರಲ್ಲಿ ಆಪಾದಿತರನ್ನು ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಬದಲಾಯಿಸಿ ಮೆ:ಅಮೃತ್ ಡಿಸ್ಟಿಲರೀಸ್ ಲಿ., ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 52 ಸೇಇವಿ 2020, ದಿನಾಂಕ: 25–11–2020 ರನ್ವಯ ಆಪಾದಿತರ ಅಮಾನತನ್ನು 6 ತಿಂಗಳ ಒಳಗಾಗಿ ತೆರವುಗೊಳಿಸಲು ಕ್ರಮ ಜರುಗಿಸಬೇಕಾಗಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ಆಇ 6 ಇಪಿಎಸ್ 2022, ದಿನಾಂಕ: 14.11.2022 ರಲ್ಲಿ ಅಂತರ ರಾಜ್ಯ ಗಡಿ ಪ್ರದೇಶಗಳೊಂದಿಗೆ ಹೊಂದಿಕೊಂಡಿರುವ ಜಿಲ್ಲೆಗಳ ಗಡಿಗಳಲ್ಲಿನ ಮುಖ್ಯ ರಸ್ತೆಯಲ್ಲಿ ಹೊಸದಾಗಿ ಅಬಕಾರಿ ತನಿಖಾ ಠಾಣೆಗಳನ್ನು ಸೃಜಿಸುವ ಸಲುವಾಗಿ ಅಬಕಾರಿ ಉಪ ನಿರೀಕ್ಷಕರ ವೃಂದದಲ್ಲಿ ಈ ಹಿಂದೆ ಕೆಲವು ಡಿಸ್ಟಿಲರಿಗಳಲ್ಲಿ ಮಂಜೂರಾಗಿದ್ದ ಹುದ್ದೆಗಳನ್ನು ಅಬಕಾರಿ ನಿರೀಕ್ಷಕರ ಹುದ್ದೆಗಳನ್ನಾಗಿ ಮೇಲ್ದರ್ಜೆಗೇರಿಸಿ ಮರು ವಿನ್ಯಾಸಗೊಳಿಸಿ ಆದೇಶಿಸಲಾಗಿರುವುದರಿಂದ ಹಾಲಿ ರಾಜ್ಯದಲ್ಲಿ ಕಾರ್ಯನಿರ್ವಹಕವಲ್ಲದ ಅಬಕಾರಿ ಉಪ ನಿರೀಕ್ಷಕರುಗಳ ಹುದ್ದೆಗಳು ಖಾಲಿ ಇಲ್ಲದೇ ಇರುವುದರಿಂದ ಆಪಾದಿತರನ್ನು ಅಬಕಾರಿ ಆಯುಕ್ತರ ನಡವಳಿ ಆದೇಶ ಸಂಖ್ಯೆ: ಎಕ್ಸೈಜ್–17011/10/2022/ಡಿಎಸ್‌ಸಿ/ಮಂ.ವಿ, ದಿನಾಂಕ: 02.12.2022ರಲ್ಲಿ ಆಪಾದಿತರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅವರ ಅಮಾನತ್ತನ್ನು ತೆರವುಗೊಳಿಸಿ ಖಾಲಿ ಇರುವ ಅಬಕಾರಿ

ನಿರೀಕ್ಷಕರ ಕಛೇರಿ, ಬಾಲ್ಕಿ ವಲಯ, ಬೀದರ್ ಜಿಲ್ಲೆಯಲ್ಲಿರುವ ಕಾರ್ಯನಿರ್ವಾಹಕ ಹುದ್ದೆಯಾದ ಅಬಕಾರಿ ಉಪ ನಿರೀಕ್ಷಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ತೈನಾತಿಸಿ ಆದೇಶಿಸಲಾಗಿರುತ್ತದೆ.

4) **ಶ್ರೀ ಚಲುವರಾಜು, ಅಬಕಾರಿ ನಿರೀಕ್ಷಕರು, ಅಬಕಾರಿ ನಿರೀಕ್ಷಕರವರ ಕಛೇರಿ, ಗುಂಡ್ಲುಪೇಟೆ ವಲಯ, ಚಾಮರಾಜನಗರ ಜಿಲ್ಲೆ.**

ಶ್ರೀ ಚಲುವರಾಜು, ಅಬಕಾರಿ ನಿರೀಕ್ಷಕರು, ಅಬಕಾರಿ ನಿರೀಕ್ಷಕರ ಕಛೇರಿ, ಗುಂಡ್ಲುಪೇಟೆ ವಲಯ, ಚಾಮರಾಜನಗರ ಜಿಲ್ಲೆ ಇವರು ಆದಾಯಕ್ಕಿಂತ ಹೆಚ್ಚಿನ ಆಸ್ತಿಯನ್ನು ಹೊಂದಿರುವ ಆರೋಪದ ಬಗ್ಗೆ ಚಾಮರಾಜನಗರ ಜಿಲ್ಲೆಯ ಎಸಿಬಿ ಪೊಲೀಸ್ ಠಾಣೆ ಇಲ್ಲಿ ದಾಖಲಾದ ಗುನ್ನೆ ಸಂಖ್ಯೆ:02/2022, ದಿನಾಂಕ:15–03–2022 ಪ್ರಕರಣದಲ್ಲಿ ಆಪಾದಿತರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ನಡವಳಿ ಸಂಖ್ಯೆ: ಅಬಕಾರಿ–17011/11/2022, ದಿನಾಂಕ:16.05.2022ರಲ್ಲಿ ಆಪಾದಿತರನ್ನು ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಬದಲಾಯಿಸಿ ಕೆ.ಎಸ್.ಬಿ.ಸಿ.ಎಲ್ ಡಿಪೋ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 52 ಸೇಇವಿ 2020, ದಿನಾಂಕ:25.11.2020 ರನ್ವಯ ಆಪಾದಿತರ ಅಮಾನತನ್ನು 6 ತಿಂಗಳ ಒಳಗಾಗಿ ತೆರವುಗೊಳಿಸಲು ಕ್ರಮ ಜರುಗಿಸಬೇಕಾಗುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: 19376 / 2022 (ಎಸ್.ಕೆ.ಎಸ್.ಟಿ), ದಿನಾಂಕ:27.10.2022 ರಲ್ಲಿ ಮಾನ್ಯ ನ್ಯಾಯಾಲಯವು ಆಪಾದಿತರ ಅಮಾನತ್ತನ್ನು ತೆರವುಗೊಳಿಸಲು ಶಿಸ್ತು ಪ್ರಾಧಿಕಾರಕ್ಕೆ ನಿರ್ದೇಶನ ನೀಡಿರುತ್ತದೆ. ಅದರಂತೆ, ಆಪಾದಿತರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ನಡವಳಿ ಆದೇಶ ಸಂಖ್ಯೆ: ಅಬಕಾರಿ–17011/11/2022, ದಿನಾಂಕ:05.12.2022ರಲ್ಲಿ ಆಪಾದಿತರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತನ್ನು ತೆರವುಗೊಳಿಸಿ ಕೆ.ಎಸ್.ಬಿ.ಸಿ.ಎಲ್ ಡಿಪೋ, ಹುಣಸೂರು, ಮೈಸೂರು ಗ್ರಾಮಾಂತರ ಜಿಲ್ಲೆ ಇಲ್ಲಿ ಖಾಲಿ ಇರುವ ಕಾರ್ಯನಿರ್ವಾಹಕವಲ್ಲದ ಅಬಕಾರಿ ನಿರೀಕ್ಷಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ತೈನಾತಿಸಿ ಆದೇಶಿಸಲಾಗಿರುತ್ತದೆ.

5) **ಶ್ರೀ ಆರ್. ನಾಗಶಯನ, ಅಂದಿನ ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.**

ಶ್ರೀ ಆರ್. ನಾಗಶಯನ, ಅಂದಿನ ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರು ಸನ್ನದುದಾರರುಗಳಿಂದ ಲಂಚದ ಬೇಡಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಜಿಲ್ಲೆಯ

ಎಸಿಬಿ ಪೊಲೀಸ್ ಠಾಣೆ ಇಲ್ಲಿ ದಾಖಲಾದ ಗುನ್ನೆ ಸಂಖ್ಯೆ:06/2022, ದಿನಾಂಕ:10.05.2022 ಪ್ರಕರಣದಲ್ಲಿ ಆಪಾದಿತರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ಆಇ 47 ಇಪಿಎಸ್ 2022, ದಿನಾಂಕ:19.05.2022ರಲ್ಲಿ ಆಪಾದಿತರನ್ನು ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಬದಲಾಯಿಸಿ ಅಬಕಾರಿ ಉಪ ಆಯುಕ್ತರು, ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್, ಕುಂಬಳಗೋಡು, ಶಯೋರಾ ಆರ್ಚೆಡ್ಸ್, ಬೆಂಗಳೂರು-74 ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

ತದನಂತರ, ಆಪಾದಿತರು ಸರ್ಕಾರದ ಅಮಾನತ್ತು ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಂಗಳೂರು ಇಲ್ಲಿ ಅರ್ಜಿ ಸಂಖ್ಯೆ: 2159/ 2022 ಅನ್ನು ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ದಿನಾಂಕ:09.06.2022ರ ಮಧ್ಯಂತರ ಆದೇಶದನ್ವಯ ಸರ್ಕಾರದ ಆದೇಶಕ್ಕೆ ಮುಂದಿನ ವಿಚಾರಣಾ ದಿನಾಂಕದವರೆಗೂ ತಡೆಯಾಜ್ಞೆಯನ್ನು ನೀಡಿರುತ್ತದೆ. ತದನಂತರ, ದಿನಾಂಕ: 07-06-2022, 28-06-2022, 20-07-2022, 02-08-2022, 06-09-2022, 19-09-2022, 22-09-2022, 11-10-2022, 02-11-2022, 15-11-2022, 22-11-2022, 12-12-2022, 20-12-2022 ರಂದು ವಿಚಾರಣೆಗೆ ಬಂದಿದ್ದು ಮಾನ್ಯ ನ್ಯಾಯಾಲಯವು ಸದರಿ ದಿನಾಂಕಗಳಂದು ತಡೆಯಾಜ್ಞೆಯನ್ನು ವಿಸ್ತರಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಆಇ 47 ಇಪಿಎಸ್ 2022, ದಿನಾಂಕ:10.06.2022ರ ಅಧಿಸೂಚನೆಯಲ್ಲಿ ಶ್ರೀ ಆರ್. ನಾಗಶಯನ ಅಂದಿನ ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಇವರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಕಾರ್ಯನಿರ್ವಾಹಕವಲ್ಲದ ಹುದ್ದೆಯಾದ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್, ಕುಂಬಳಗೋಡು, ಬೆಂಗಳೂರು ಇಲ್ಲಿನ ಖಾಲಿ ಹುದ್ದೆಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. ಆಪಾದಿತರು ಸಲ್ಲಿಸಿರುವ ಮೇಲ್ಮನವಿ ಅರ್ಜಿ ಸಂಖ್ಯೆ: 2159/2022 ಅನ್ನು ಮಾನ್ಯ ನ್ಯಾಯಾಲಯವು ದಿನಾಂಕ:03.02.2023 ರಂದು ಪುರಸ್ಕರಿಸಿ ಸರ್ಕಾರದ ಅಮಾನತ್ತು ಆದೇಶವನ್ನು ರದ್ದುಪಡಿಸಿರುತ್ತದೆ. ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಯಾವುದೇ ಸಕಾರಣ ಕಂಡುಬಾರದೇ ಇರುವುದರಿಂದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ಆಇ 29 ಇಪಿಎಸ್ 2022, (ಭಾಗ-4), ಬೆಂಗಳೂರು, ದಿನಾಂಕ: 16.08.2022ರ ಆಧೇಶದಲ್ಲಿ ಶ್ರೀ ಆರ್. ನಾಗಶಯನ, ಅಂದಿನ ಅಬಕಾರಿ ಉಪ ಆಯುಕ್ತರು, ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್, ಕುಂಬಳಗೋಡು, ಬೆಂಗಳೂರು ಇವರನ್ನು ಆಡಳಿತಾತ್ಮಕ

ಹಿತದೃಷ್ಟಿಯಿಂದ ಅಬಕಾರಿ ಉಪ ಆಯುಕ್ತರು, ಚಾಮರಾಜನಗರ ಜಿಲ್ಲೆ ಇಲ್ಲಿನ ಖಾಲಿ ಹುದ್ದೆಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

ಇದೇ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಆರ್.ನಾಗಶಯನ, ಅಂದಿನ ಅಬಕಾರಿ ಉಪ ಆಯುಕ್ತರು, ಚಿತ್ರದುರ್ಗ ಜಿಲ್ಲೆ ಇವರ ವಾಹನ ಚಾಲಕರಾದ ಶ್ರೀ ಆರ್. ಮೊಹಿಸಿನ್ ಪಾಷಾ, ಇವರ ವಿರುದ್ಧ ಸಹ ಲಂಚದ ಆರೋಪಕ್ಕೆ ಸಂಬಂಧಿಸಿದಂತೆ ಎಸಿಬಿ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 06/2022, ದಿನಾಂಕ:10–05–2022 ರಂದು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತದೆ. ಆಪಾದಿತರ ವಿರುದ್ಧದ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಅಬಕಾರಿ ಆಯುಕ್ತರ ನಡವಳಿ ಸಂಖ್ಯೆ: ಅಬಕಾರಿ –17011/14/2022, ದಿನಾಂಕ:13.05.2022ರ ಆದೇಶದನ್ವಯ ಆಪಾದಿತರನ್ನು ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ), (ಹೊಸಪೇಟೆ ವಿಭಾಗ), ವಿಜಯನಗರ ಜಿಲ್ಲೆ ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ. ತದನಂತರ, ಆಪಾದಿತ ನೌಕರರ ಮನವಿಯ ಮೇರೆಗೆ ಅವರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಬಕಾರಿ ಆಯುಕ್ತರ ನಡವಳಿ ಸಂಖ್ಯೆ: ಅಬಕಾರಿ 17011/14/2022, ದಿನಾಂಕ:17.09.2022ರ ಆದೇಶದನ್ವಯ ಅಮಾನತ್ತನ್ನು ತೆರವುಗೊಳಿಸಿ ದಾವಣಗೆರೆ ಜಿಲ್ಲೆಯ ಹರಿಹರ ವಲಯದಲ್ಲಿ ಖಾಲಿ ಇರುವ ಅಬಕಾರಿ ವಾಹನ ಚಾಲಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ತೈನಾತಿಸಿ ಆದೇಶಿಸಲಾಗಿರುತ್ತದೆ.

6) <u>ಶ್ರೀಮತಿ ಸಿ.ಸೆಲೀನಾ, ಅಂದಿನ ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ.</u>

ಶ್ರೀಮತಿ ಸಿ.ಸೆಲೀನಾ, ಅಂದಿನ ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ ಇವರ ವಿರುದ್ಧ ಲಂಚದ ಬೇಡಿಕೆ ಭ್ರಷ್ಟಾಚಾರ ಆರೋಪದಡಿ ಎ.ಸಿ.ಬಿ ಪೊಲೀಸ್ ಠಾಣೆ, ಕೊಪ್ಪಳ ಇಲ್ಲಿ ದಾಖಲಾದ ಗುನ್ನೆ ಸಂಖ್ಯೆ: 05/2022, ದಿನಾಂಕ:14.05.2022 ಪ್ರಕರಣದಲ್ಲಿ ಆಪಾದಿತರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಸರ್ಕಾರದ ಆದೇಶ ಸಂಖ್ಯೆ: ಆಇ 48 ಇಪಿಎಸ್ 2022, ಬೆಂಗಳೂರು. ದಿನಾಂಕ:25.05.2022 ರಲ್ಲಿ ಆಪಾದಿತರನ್ನು ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಬದಲಾಯಿಸಿ ಮೆ:ಜಾನ್ ಡಿಸ್ಟಿಲರೀಸ್ ಪ್ರೈ.ಲಿ, ಬೆಂಗಳೂರು ಇಲ್ಲಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

ತದನಂತರ, ಆಪಾದಿತರು ಸರ್ಕಾರದ ಅಮಾನತ್ತು ಆದೇಶವನ್ನು ಪ್ರಶ್ನಿಸಿ ಮಾನ್ಯ ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಬೆಳಗಾವಿ ಇಲ್ಲಿ ಅರ್ಜಿ ಸಂಖ್ಯೆ: 10667/2022 ಅನ್ನು ದಾಖಲಿಸಿರುತ್ತಾರೆ. ಮಾನ್ಯ ನ್ಯಾಯಾಲಯವು ದಿನಾಂಕ:04.07.2022ರ ಮಧ್ಯಂತರ ಆದೇಶದಲ್ಲಿ ಸರ್ಕಾರದ ಆದೇಶಕ್ಕೆ ಮುಂದಿನ ವಿಚಾರಣಾ ದಿನಾಂಕದವರೆಗೂ ತಡೆಯಾಜ್ಞೆಯನ್ನು ನೀಡಿರುತ್ತದೆ. ತದನಂತರ, ದಿನಾಂಕ:

04-08-2022, 01-09-2022, 20-09-2022, 20-10-2022, 16-11-2022, 01-12-2022, 16-12-2022, 16-01-2023, 01-02-2023, 07-02-2023, 23-02-2023, 09-03-2023, 21-03-2023, 29-03-2023 ರಂದು ವಿಚಾರಣೆಗೆ ಬಂದಿದ್ದು ಮಾನ್ಯ ನ್ಯಾಯಾಲಯವು ಸದರಿ ದಿನಾಂಕಗಳಂದು ತಡೆಯಾಜ್ಞೆಯನ್ನು ವಿಸ್ತರಿಸಿರುತ್ತದೆ. ಮಾನ್ಯ ನ್ಯಾಯಾಲಯವು ದಿನಾಂಕ:24.05.2023 ರಂದು ಅರ್ಜಿಯನ್ನು ಪುರಸ್ಕರಿಸಿ ಸರ್ಕಾರದ ಅಮಾನತ್ತು ಆದೇಶವನ್ನು ರದ್ದುಪಡಿಸಿರುತ್ತದೆ. ಸದರಿ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ವಿಷಯವು ಪರಿಶೀಲನೆಯಲ್ಲಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 73 ಇಪಿಎಸ್ 2021, ಬೆಂಗಳೂರು, ದಿನಾಂಕ: 14.07.2023ರ ಅಧಿಸೂಚನೆಯಲ್ಲಿ ಶ್ರೀಮತಿ ಸಿ.ಸೆಲೀನಾ, ಅಂದಿನ ಅಬಕಾರಿ ಉಪ ಆಯುಕ್ತರು, ಕೊಪ್ಪಳ ಜಿಲ್ಲೆ ಇವರನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ಕಾರ್ಯನಿರ್ವಾಹಕವಲ್ಲದ ಹುದ್ದೆಯಾದ ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್, ಕುಂಬಳಗೋಡು, ಬೆಂಗಳೂರು ಇಲ್ಲಿನ ಖಾಲಿ ಹುದ್ದೆಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

7) <u>ಶ್ರೀ ಮಂಜುನಾಥ್ ಎಸ್, ಅಂದಿನ ಅಬಕಾರಿ ನಿರೀಕ್ಷಕರು, ವಲಯ ಸಂಖ್ಯೆ: 17, ಕೆಂಗೇರಿ, ಬಿಯುಡಿ-3,.</u>

ಶ್ರೀ ಮಂಜುನಾಥ್ ಎಸ್, ಅಂದಿನ ಅಬಕಾರಿ ನಿರೀಕ್ಷಕರು, ವಲಯ ಸಂಖ್ಯೆ: 17, ಕೆಂಗೇರಿ, ಬಿಯುಡಿ-3, ಇವರು ಸನ್ನದುದಾರರಿಂದ ಲಂಚ ಬೇಡಿಕೆ ಇಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಎ.ಸಿ.ಬಿ ಪೋಲೀಸ್ ಠಾಣೆ, ಬೆಂಗಳೂರು ನಗರ ಪೊಲೀಸ್ ಠಾಣೆ, ಇಲ್ಲಿ ದಾಖಲಾದ ಗುನ್ನೆ ಸಂಖ್ಯೆ: 43/2022, ದಿನಾಂಕ: 19.05.2022 ಪ್ರಕರಣದಲ್ಲಿ ಆಪಾದಿತರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾದಂತೆ ಕಂಡುಬಂದ ಹಿನ್ನೆಲೆಯಲ್ಲಿ ಸದರಿಯವರನ್ನು ಅಬಕಾರಿ ಆಯುಕ್ತರ ನಡವಳಿ ಸಂಖ್ಯೆ:ಎಕ್ಸೈಜ್-17011/17/2022, ದಿನಾಂಕ:27.05.2022 ರಲ್ಲಿ ಅವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಬದಲಾಯಿಸಿ ಮೆ:ಎಸ್ ಡಿ ಯು (ಫ್ರೂಟ್) ವೈನರಿ ಪ್ರೈ.ಲಿ., ಗೌರೀಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ ಖಾಲಿ ಇರುವ ಅಬಕಾರಿ ನಿರೀಕ್ಷಕರ ಹುದ್ದೆಗೆ ತೈನಾತಿಸಲಾಗಿರುತ್ತದೆ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 52 ಸೇಇವಿ 2020, ದಿನಾಂಕ:25.11.2020ರನ್ವಯ ಆಪಾದಿತರ ಅಮಾನತನ್ನು 6 ತಿಂಗಳ ಒಳಗಾಗಿ ತೆರವುಗೊಳಿಸಲು ಕ್ರಮ ಜರುಗಿಸಬೇಕಾಗಿರುತ್ತದೆ. ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ: 2924/2022, ದಿನಾಂಕ: 05-12-2022ರ ಆದೇಶದಲ್ಲಿ ಅಮಾನತ್ತು ಆದೇಶವನ್ನು ರದ್ದುಪಡಿಸಿರುತ್ತದೆ. ಆದ್ದರಿಂದ, ಅವರ

ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಬಕಾರಿ ಆಯುಕ್ತರ ನಡವಳಿ ಆದೇಶ ಸಂಖ್ಯೆ: ಎಕ್ಸೈಜ್-17011/17/2022, ದಿನಾಂಕ:11.01.2023ರಲ್ಲಿ ಅಮಾನತ್ತನ್ನು ತೆರವುಗೊಳಿಸಿ ಕಾರ್ಯನಿರ್ವಾಹಕವಲ್ಲದ ಮೆ:ಟೋಯಿಟ್ ಬ್ರೀವರೀಸ್ ಪ್ರೈ.ಲಿ., ನೆಲಮಂಗಲ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿನ ಅಬಕಾರಿ ನಿರೀಕ್ಷಕರ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ತೈನಾತಿಸಿ ಆದೇಶಿಸಲಾಗಿರುತ್ತದೆ.

8) ಶ್ರೀ ಬಸವರಾಜು, ಅಂದಿನ ಅಬಕಾರಿ ನಿರೀಕ್ಷಕರು, ಮಾನ್ವಿ ವಲಯ, ರಾಯಚೂರು.

ಶ್ರೀ ಬಸವರಾಜು, ಅಂದಿನ ಅಬಕಾರಿ ನಿರೀಕ್ಷಕರು, ಮಾನ್ವಿ ವಲಯ, ರಾಯಚೂರು ಇವರು ಸನ್ನದುದಾರರಿಂದ ಲಂಚ ಬೇಡಿಕೆ ಇಟ್ಟಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೋಲೀಸ್ ಠಾಣೆ, ರಾಯಚೂರು ಇಲ್ಲಿ ದಾಖಲಾದ ಗುನ್ನೆ ಸಂಖ್ಯೆ:01/2023, ದಿನಾಂಕ:31.01.2023 ಪ್ರಕರಣದಲ್ಲಿ ಆಪಾದಿತರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾದಂತೆ ಕಂಡುಬಂದ ಹಿನ್ನೆಲೆಯಲ್ಲಿ ಸದರಿಯವರನ್ನು ಅಬಕಾರಿ ಆಯುಕ್ತರ ನಡವಳಿ ಸಂಖ್ಯೆ: ಎಕ್ಸೈಜ್-17011/16/2023, ದಿನಾಂಕ:20.02.2023 ರಲ್ಲಿ ಸದರಿಯವರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಅವರ ಲೀನ್ ಅನ್ನು ಬದಲಾಯಿಸಿ ಕೆ.ಎಸ್.ಬಿ.ಸಿ.ಎಲ್ ಡಿಪೋ, ಕುಶಾಲನಗರ, ಕೊಡಗು ಜಿಲ್ಲೆಯಲ್ಲಿ ಖಾಲಿ ಇರುವ ಅಬಕಾರಿ ನಿರೀಕ್ಷಕರ ಹುದ್ದೆಗೆ ತೈನಾತಿಸಲಾಗಿರುತ್ತದೆ. ತದನಂತರ, ನೌಕರರು ಅವರ ಅಮಾನತ್ತನ್ನು ತೆರವುಗೊಳಿಸಲು ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಅಮಾನತ್ತನ್ನು ತೆರವುಗೊಳಿಸುವ ವಿಷಯವು ಪರಿಶೀಲನೆಯಲ್ಲಿದೆ.

9) ಶ್ರೀ ವಿ.ರಮೇಶ್, ಅಬಕಾರಿ ನಿರೀಕ್ಷಕರು, ಗೌರೀಬಿದನೂರು ವಲಯ

ಶ್ರೀ ವಿ.ರಮೇಶ್, ಅಬಕಾರಿ ನಿರೀಕ್ಷಕರು, ಗೌರೀಬಿದನೂರು ವಲಯ, ಇವರ ವಿರುದ್ಧ ಲೋಕಾಯುಕ್ತ ಅಧಿಕಾರಿಗಳು ಹೆಚ್ಚಿನ ಆದಾಯ ಗಳಿಸಿರುವ ಆರೋಪದಡಿ ದಿನಾಂಕ:28.06.2023 ರಂದು ಅವರ ಮನೆ ಹಾಗೂ ಕಛೇರಿಯ ಮೇಲೆ ದಾಳಿ ನಡೆಸಿರುತ್ತಾರೆ. ಈ ಸಂಬಂಧ ದಾಖಲಾದ ಪ್ರಥಮ ವರ್ತಮಾನ ವರದಿ ಹಾಗೂ ಇತರೆ ಅಗತ್ಯ ದಾಖಲಾತಿಗಳು ಸ್ವೀಕೃತವಾದ ನಂತರ ಸೂಕ್ತ ಕ್ರಮ ವಹಿಸಲಾಗುವುದು.

(ಆರ್.ಬಿ.ತಿಮ್ಮಾಪುರ)
ಅಬಕಾರಿ ಸಚಿವರು

ಆಇ 51 ಇಎಲ್‌ಕ್ಯೂ 2023